

"ನಾನೇ? ಅಯ್ಯೋ... ನಾನೇ?... ಹಾಗೆ ಮಾಡುವ ಕೆಟ್ಟ ಮನುಷ್ಯ?''

"ಹೌದಯ್ಯಾ... ಸಾಕ್ಷಾತ್ ನೀನೆ... ಅನುಮಾನವೇ ಇಲ್ಲ.''

"ಅಯ್ಯೋ ದೇವರೇ, ಪ್ರಮಾಣವಾಗಿಯೂ ಇಲ್ಲ ಸ್ವಾಮಿ, ಖಂಡಿತ ಇಲ್ಲ; ಇದರ ಬಗ್ಗೆ ನನಗೆ ಏನೇನೂ ಗೊತ್ತಿಲ್ಲ ನನ್ನನ್ನು ನಂಬಿ."

"ನಾನು ಹೇಳ್ತಾ ಇದೀನಲ್ಲಯ್ಯಾ... ಇನ್ನೇನು? ಅದೂ ಅಲ್ಲದೆ ನೀನು ಎತ್ತಿಕೊಂಡದ್ದನ್ನು ಕಣ್ಣಾರೆ ನೋಡಿದವರೇ ಇದಾರೆ... ಗೊತ್ತಾ?"

"ಯಾರು... ಯಾರು ಸ್ವಾಮಿ ಹಾಗೆಲ್ಲ ನನ್ನ ಬಗ್ಗೆ ಇಲ್ಲದ್ದನ್ನೆಲ್ಲ ಹೇಳೋರು?'' ಹಾಶ್‌ಕಾಮ್ ಉದ್ವಿಗ್ನನಾಗಿ ಬಡಬಡಿಸಿದ.

"ಬೇರೆ ಯಾರೂ ಅಲ್ಲಾ ಕಣಯ್ಯ ಆ ಜೀನು ಮಾಡುವ ಮಿಲಾಂಡಾನ್ ಇದಾನಲ್ಲ, ಅವನೇ ಖುದ್ದಾಗಿ ಬಂದು ನನಗೆ ಹೇಳಿದ್ದಾನೆ. ಅವನಿಗಿಂತ ನಂಬಿಗಸ್ಥರು ಬೇಕೆ?''

ಇದೀಗ ಆ ರೈತನಿಗೆ ಬೆಳಗಿನ ತಂತಿಯ ವಿಷಯಗಳೆಲ್ಲವೂ ನೆನಪಿಗೆ ಬಂತು. ಅವನಿಗೆ ಕೋಪ ದೇಹದಾದ್ಯಂತ ಉಕ್ಕೇರಿತು. ರಕ್ತವೆಲ್ಲ ಮುಖಕ್ಕೆ ನುಗ್ಗಿ ಕೆಂಪೇರಿ ಹುಚ್ಚನಂತೆ ತೊದಲಿದ...

"ಓಹೋ ನೋಡಿಬಿಟ್ಟ ನನ್ನ, ಅಯೋಗ್ಯ... ಅವನೊಬ್ಬ ಅತಿ ದುಷ್ಟ ಮಹಾಸ್ವಾಮಿ... ಚಾಡಿ ಹೇಳಿದಾನೆ ನನ್ನ ಮೇಲೆ ಅಷ್ಟೇ... ಬರೀ ಚಾಡಿಕೋರ ಅವನು... ಅಷ್ಟೇ! ಅವನು ನೋಡಿದ್ದು... ಇಗೋ ಈ ತಂತಿ ತುಂಡನ್ನು... ಬೇರೇನೂ ಅಲ್ಲ. ಅದು ಇಲ್ಲೇ ಇದೆ ನೋಡಿ..." ಅನ್ನುತ್ತಾ ತಕ್ಷಣವೇ ತನ್ನ ಜೇಬಿನೊಳಗೆ ಕೈತೂರಿಸಿ ತಡಕಾಡಿ ತಂತಿಯನ್ನು ಹೊರಗೆಳೆದು ಮೇಯರ್‌ಗೆ ತೋರಿಸಿದ.

ಆದರೆ, ಮೇಯರ್ ದೃಢವಾಗಿ ತಲೆ ಕೊಡವಿ ಬಿಟ್ಟ...